ಮಾಡುವ ಪ್ರಶ್ನೆನೇ ಇಲ್ಲ ಯಾರಿಗೂ. ಅಂಥದರಲ್ಲಿ ಎಲ್ಲರಿಗೂ ಲೈಟ್ ಸಾಹಿತ್ಯ ಬೇಕು. ಅದಕ್ಕಾಗಿ ಅಲ್ಲಿ ಇಲ್ಲಿ ಸಾಲ ಮಾಡಿ ಅಂಗಡಿ ಹಾಕಿದ್ದ. ಬಹುಶಃ ಉಪಯೋಗವಾಗುತ್ತಿಲ್ಲ ಎಂದೆಲ್ಲ ಹೇಳಿ ಮುಗಿಸಿದ್ದ. ಮತ್ತು ನಂತರ ತತ್‌ಕ್ಷಣ ಮಲಗಿದ್ದ. ತನಗೂ ಅಲ್ಲೇ ಅವನ ಜೊತೆಗೆ ಡ್ರಾಯಿಂಗ್ ರೂಮಿನಲ್ಲಿ ಮಲಗಬೇಕೆನಿಸಿದರೂ ಒಳಗಿನ ಹೆಂಡತಿಯ ಬಗ್ಗೆ ಯೋಚಿಸಿ ಬೆಡ್‌ರೂಮ್ ಹೊಕ್ಕಾಗ ಯಾಕೋ ಏನೋ ಜೋರಾಗಿ ಅತ್ತುಬಿಡಬೇಕು ಅನಿಸಿತು.

ಮರುದಿನ ಬೆಳಗಿನ ಏಳು ಗಂಟೆಗೇ ಹೊರಟು ಹೋಗಿದ್ದ ವಸಂತ. ಹೆಂಡತಿಯನ್ನು ಎಬ್ಬಿಸಬೇಡ ಎಂದು ತಾನೇ ಅಡುಗೆ ಮನೆಗೆ ಹೋಗಿ ಎರಡು ಕಪ್ ಚಹಾ ಮಾಡಿ ತಂದದ್ದನ್ನು ರತ್ನಾಕರ ನೆನಸಿದ. ಹೋಗುವಾಗ 'ನೆನಪಾದಾಗ ಬರತಿರ್ರಿ ಅಥವಾ  ಬರೀತಿರ್ರಿ, ನೀವು ಬರಾಂಗಿಲ್ಲಾ ಅಂದದ್ದಕ್ಕ ನಿಮಗ ನೆನಪ ಇರಾಂಗಿಲ್ಲಂತಲ್ಲ. ಆದ್ರ ಆ ನೆನಪಿನ ಬತ್ತಿಗೆ ಯಾವಾಗ ಯಾವಾಗರೆ ಎಣ್ಣೆ ಹಣಸತಿರಬೇಕು. ಅದ, ಬರೇ ಬದುಕು. ಅದ, ಬರೇ ಬೆಳಕು' ಅಂದದ್ದು ಕೇಳಿ ಒಂದು ಕ್ಷಣ ಬೆಳಗಿನ ಕನಸಿನಲ್ಲಿ ದೇವದೂತ ಬಂದಂತೆ ಯಾಕೆ ಭಾಸವಾಗಿತ್ತು ತನಗೆ? ಆಮೇಲೆ ಇವನನ್ನು ಕಳಿಸಿ ಬರುವಾಗ ತಾನು ತಬ್ಬಲಿ, ತನಗೆ ಯಾರೂ ಇಲ್ಲ ಎಂದು ಯಾಕೆ ಅನಿಸಿತ್ತು?

ಹೆಂಡತಿ ಅವನು ತಂದ ಪುಸ್ತಕಗಳನ್ನು ನೋಡುತ್ತ ಕೈಯಲ್ಲಿ 'ತುಘಲಕ' ಹಿಡಿದು (ಪುಸ್ತಕದ ಮೊದಲನೆಯ ಪುಟದಲ್ಲಿ 'ಪ್ರಿಯ ರತ್ನಾಗೆ –ನಾನು–ನೀನು ಸಂಜೆಯ ಹೊತ್ತಿಗೆ ನಡೆದ ಶಾಲೆಯ ಹಿಂದಿನ ರಸ್ತೆಯ ಪಾರಿಜಾತದ ಗಿಡದ ನೆನಪಿಗೆ –ವಸಂತ' ಎಂದು ಬರೆದಿತ್ತು. 'ಊರಿಂದ ಬೆಂಗಳೂರು. ಬೆಂಗಳೂರಿನಿಂದ ಹರಿಹರ. ಹರಿಹರದಿಂದ ಮುಂದೆ ಎಲ್ಲ ನಿಮ್ಮ ತುಘಲಕನ ಪ್ರವಾಸ' ಅಂದಾಗ ಅವಳ ಬಗ್ಗೆ (ಆ ಕ್ಷಣಕ್ಕಾದರೂ) ಹೇಸಿಗೆ ಅನಿಸಿತ್ತು.

ಊರಿಗೆ ಬರುವ ಮುಂಚೆ ಅನುಸೂಯರನ್ನು ಮತ್ತೊಮ್ಮೆ ಭೇಟ್ಟಿಯಾಗಿ ಬಂದಿದ್ದ ರತ್ನಾಕರ. ಮನಸ್ಸಿನಲ್ಲಿ ಯಾಕೋ ಏನೋ ವಿಷಾದ, ಕಳವಳ. ಜಾನಕಿಯನ್ನು ಭೇಟ್ಟಿಯಾಗಬೇಕೆಂದು ಪದೇ ಪದೇ ಅನಿಸುತ್ತಿತ್ತು. ಜಾನಕಿ ಖರ್ಡಿ ಬಿಟ್ಟು ಧಾರವಾಡಕ್ಕೆ ಬಂದದ್ದು ಗೊತ್ತಾಗಿತ್ತು. ಹೆಂಡತಿ ಇಂಥ ಪ್ರಸಂಗಗಳಲ್ಲಿ ಹುಟ್ಟುವ ಸೂಕ್ಷ್ಮಗಳನ್ನು ಲೆಖ್ಖಹಾಕಿ ಅತ್ಯಂತ ಬುದ್ಧಿವಂತ ಮಾತನಾಡಿದ್ದಳು. 'ಹೋಗೂದಾದ್ರ ಎಲ್ಲಾ ಗೆಳ್ಯಾರು ಕೂಡಿಕೊಂಡು ಹೋಗ್ರಿ. ಅಷ್ಟ... ಇಷ್ಟು ಮದತ ಮಾಡಬೇಕೆನಿಸಿದರೆ ಎಲ್ಲರೂ ಕೂಡಿ ಏನಾರೆ ಕೊಟ್ಟ ಬರ್‍ರಿ. ಒಬ್ರ ಹೋದ್ರ ಎಲ್ಲಾ ಭಾರ ನಮ್ಯಾಲೆ ಬೀಳೋ ಚಾನ್ಸು ಕೂಡ. ಇಷ್ಟಕ್ಕೂ ಎಲ್ಲರೂ ಬರೂ ಮುಂದ ತಂತಮ್ಮ ನಶೀಬ ತಗೊಂಡೇ ಬಂದಿರ ವಿಚಾರ, ಯಾರ ಸಲುವಾಗಿ ಯಾರು ಎಷ್ಟಂತ ಮಾಡಬಹುದು ಹೇಳ್ರಿ ಯಾರು ಹೋದ್ರು ಏನೂ ನಿಂದ್ರಾಂಗಿಲ್ಲಾ' ಎಂದೆಲ್ಲ ಹೇಳಿದರೂ ಈ 'ತತ್ವಜ್ಞಾನ'ದ ಹಿಂದೆ ಇರುವ ನಿಜ ಅವನಿಗೆ ಗೊತ್ತಿತ್ತು.

ಜಾನಕಿ ಹೊಲಿಗೆ ಮಶೀನಿನ ಮೇಲೆ ಫ್ರಾಕು ಹೊಲೆಯುತ್ತಿದ್ದಳು. ಅಲ್ಲೇ ಕಪಾಟಿನ ಮೇಲೆ ಫ್ರಾಕು, ಸಣ್ಣ ಮಕ್ಕಳ ಅಂಗಿ ನೋಡಿ ಇವಳು ಟೇಲರಿಂಗ್ ಕೆಲಸ ಪ್ರಾರಂಭ ಮಾಡಿದ್ದಾಳೆ ಎಂಬುದರ ಖಾತ್ರಿಯಾಗಿತ್ತು. ಹುಡುಗರಿಬ್ಬರೂ ಶಾಲೆಗೆ ಹೋಗಿದ್ದರು.

'ನಾನು ರತ್ನಾಕರ, ವಸಂತನ...' ಎಂದು ಮಾತು ಮುಗಿಸುವ ಮೊದಲೇ 'ನೀವ, ಏನು ರತ್ನಾಕರ? ಭಾಳ ಹೇಳತಿದ್ರೂ ಇರೂತನಕಾ ನಿಮ್ಮ ಸಲುವಾಗಿ' ಎಂದು ಕಣ್ಣೀರು ಪ್ರಯತ್ನ ಪೂರ್ವಕವಾಗಿ ತಡೆದು, ಒಳಗೆ ಹೋಗಿ ನೀರು ತಂದು, ಚಾಪೆ ಹಾಸಿ 'ಕೂಡ್ರಿ' ಅಂದಳು ಜಾನಕಿ. ಆ ರಣ ರಣ ಬಿಸಿಲಿನ ಬೇಗೆಯಲ್ಲಿ ಮುಂದೆ ಏನು ಮಾತನಾಡಬೇಕು ಎಂದು